ಅ.ದಾ. ನಂ.259/21 ಪಿ.ಡಬ್ಲ್ಯೂ-1

ದಿನಾಂಕಃ 20.06.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಂ ಡಿ ಆರ್ ವಕೀಲರಿಂದಃ

ನಾನು ಸುಮಾರು 14 ವರ್ಷಗಳಿಂದ ಶಿಕ್ಷಕ ನಾಗಿ ನಿವೃತ್ತಿನಾಗಿದ್ದೇನೆ ನಾನು 1984 ರಲ್ಲಿ ಕೆಲಸ ಸೇರಿರುತ್ತೇನೆ. ನಾನು ಈ ದಾವೆ ಯನ್ನು ಪ್ರತಿವಾದಿ ತೊಂದರೆ ನೀಡುತ್ತಿದ್ದ ಕಾರಣ ರಕ್ಷಣೆ ಕೋರಿ ಹಾಕಿರುತ್ತೇನೆ. ನಾನು ಒಟ್ಟು ಮೂರು ಸರ್ವೆನಂ ಸಂಬಂಧ ದಾವೆ ಹಾಕಿರುತ್ತೇನೆ. ಸರ್ವೆ ನಂ 39/2 ,241, 67 ರ ಸಂಬಂಧ ದಾವೆ ಹಾಕಿರುತ್ತೇನೆ. ದಾವೆ ಸರ್ವೆ ನಂ 241 ರಲ್ಲಿ ಒಟ್ಟು ಮೂರು ಎಕರೆ 25 ಗುಂಟೆ ಇದ್ದು ಅದರಲ್ಲಿ ನನಗೆ ಸೇರಿದ 2 ಎಕರೆ 35 ಗುಂಟೆ ಇರುತ್ತದೆ. ದಾವೆ ಸರ್ವೆ ನಂ 241 ರ ಚೆಕ್ಕು ಬಂದಿ ಪೂರ್ವಕ್ಕೆ ಆವನಿ ಯಿಂದ ಮುಳಬಾಗಿಲು ಹೋಗುವ ರಸ್ತೆ ಪಶ್ಚಿಮಕ್ಕೆ ಶಾಲೆ ಕಟ್ಟಡ ಉತ್ತರಕ್ಕೆ ಕಾಕಣ್ಣ ನವರ ಹೊಲ ದಕ್ಷಿಣಕ್ಕೆ ಜಂಮದಾರಪ್ಪ ನವರ ಹೊಲವಿರುತ್ತದೆ. ಉತ್ತರ ಮತ್ತು ದಕ್ಷಿಣಕ್ಕೆ ಇರುವ ಕಾಕಣ್ಣ ಮತ್ತು ಜಂಮದಾರಪ್ಪ ನವರ ಜಮೀನು ಇದೆ ಸರ್ವೆ ನಂ ನಲ್ಲಿ ಉಳಿಕೆ ಜಮೀನು ಇರುತ್ತದೆ. ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಾಗೆ ಜಂದಾರಪ್ಪ ನವರ ಮೊಮ್ಮಕಳು ವಿಚಾರಣೆಯನ್ನು ಮಾಡಿಸಲು ತೊಂದರೆ ಇಲ್ಲ.

ದಾವಾ ಸರ್ವೆ ನಂ 67 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 8 ಗುಂಟೆ ಇದ್ದು ನನಗೆ ಸೇರಿದ 32 ಗುಂಟೆ ಜಮೀನು ಇರುತ್ತದೆ. ಸರ್ವೆ ನಂ 67 ರ ಜಮೀನು ಚೆಕ್ಕು ಬಂದಿ

ಪೂರ್ವಕ್ಕೆ ವೆಂಕಟೇಶಪ್ಪ ನವರ ಜಮೀನು ಪಶ್ಚಿಮಕ್ಕೆ ಗಂಟಲಮ್ಮ ಮತ್ತು ಮುನಿಸ್ವಾಮಿ ಜಮೀನು ಉತ್ತರಕ್ಕೆ ಮುನಿವೆಂಕಟಗೌಡ ನವರ ಜಮೀನು ಮತ್ತು ದಕ್ಷಿಣಕ್ಕೆ ನೀರಿಗಂಟಿ ವೆಂಕಟರಾಮಪ್ಪ ನವರ ಜಮೀನು ಇರುತ್ತದೆ . ಪೂರ್ವಕ್ಕೆ ವೆಂಕಟೇಶಪ್ಪ ನವರ ಜಮೀನು ಇದೆ ಸರ್ವೆ ನಂ 67 ರ ಉಳಿಕೆ ಜಮೀನು ಆಗಿರುತ್ತದೆ . ಪಶ್ಚಿಮಕ್ಕೆ ಇರುವ ಗಂಟಲಮ್ಮ ಮತ್ತು ಮುನಿಸ್ವಾಮಿನವರ ಜಮೀನು ಇದೆ ಸರ್ವೆ ನಂ 67 ರ ಉಳಿಕೆ ಜಮೀನು ಆಗಿರುತ್ತದೆ. ಉತ್ತರ ಮತ್ತು ದಕ್ಷಿಣಕ್ಕೆ ಇರುವ ಜಮೀನಿ ಸರ್ವೆ ನಂ ಗೊತ್ತಿಲ್ಲ. ಪೂರ್ವ ಮತ್ತು ಪಶ್ಚಿಮಕ್ಕೆ ದಕ್ಕಿನಲ್ಲಿರುವ ಮಾಲೀಕರ ವಿಚಾರಣೆ ಮಾಡಿಸಲು ಯಾವ ತೊಂದರೆ ಇರುವುದಿಲ್ಲ. ಸರ್ವೆ ನಂ 241 ಆವನಿ ಗ್ರಾಮದಲ್ಲಿ ಇದ್ದು ಸರ್ವೆ ನಂ 67 ಆವನಿ ಗ್ರಾಮ ಮಜರಾ ರಾಮಪುರ ಗ್ರಾಮದಲ್ಲಿ ಇರುತ್ತದೆ .

ನಾನು ಚೊಲನಗುಂಟೆ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಆವನಿಗ್ರಾಮಕ್ಕೂ ಚೌಲನಗುಂಟೆ ಗ್ರಾಮಕ್ಕೂ 3 ಕಿ.ಮೀ ದೂರ ಇರುತ್ತದೆ ಎಂದರೆ 1 ಕಿ.ಲೋ ಮೀಟರ್ ಆಗುತ್ತದೆ. ದಾವಾ ಸ್ವತ್ತುಗಳು ತೋಟ ಇನಾಮಿತಿ ಸ್ವತ್ತುಗಳು ಎಂದರೆ ಸರಿ. ನಾನು ಸರ್ಕಾರಿ ಕೆಲಸದಲ್ಲಿದ್ದಾಗ ತೋಟ ಇನಾಮಿತಿ ಕೆಲಸ ಮಾಡಿಲ್ಲ ಎಂದರೆ ಸರಿ. ತೊಟ ಇನಾಮಿತಿ ಸ್ವತ್ತುಗಳು ಚೋಲನಗುಂಟೆ ಹಾಗೂ ಆವನಿ ಗ್ರಾಮದಲ್ಲಿ ಬೇರೆ ಬೇರೆ ಎಂದರೆ ಸರಿ. ಆವನಿ ಗ್ರಾಮಕ್ಕೆ ಸೇರಿದ ತೋಟ ಇನಾಮಿತಿ ಜಮೀನಿನ ಮೂಲ ಬಾರದಾರರು ಆವನಿ ಗ್ರಾಮಸ್ಥರು ಎಂದರೆ ನನ್ನ ಅಜ್ಜ ಆವನಿ ಗ್ರಾಮದಲ್ಲಿ ಇದ್ದು ಮನೆ ಕೂಡ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆ ಇರುವ ಬಗ್ಗೆ ದಾಖಲೆಯನ್ನು

ಹಾಜರುಪಡಿಸಿತ್ತೇನೆ. ಆವನಿ ಗ್ರಾಮದಲ್ಲಿ ವಾಸವಾಗಿದ್ದು ತೋಟ ಇನಾಮಿತಿ ಕೆಲಸ ಮಾಡಿರುವ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ . ಆವನಿ ಗ್ರಾಮದಲ್ಲಿ ನಾವು ವಾಸ ವಾಡಿಲ್ಲ ಮನೆ ಕೂಡ ಇಲ್ಲ ಹಾಗೂ ತೋಟ ಇನಾಮಿತಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ.

ತೋಟ ಇನಾಮಿತಿ ಜಮೀನಿನ್ನು ಸರ್ಕಾರಿ ನೌಕರನಿಗೆ ಮಂಜೂರು ಮಾಡಿವುದಿಲ್ಲ ಎಂದರೆ ಸರಿ. ನನ್ನ ತಂದೆ ಮುನಿಯಪ್ಪ. ಅವರ ತಂದೆ ಹೆಸರು ಬುಡಗಪ್ಪ. ಬುಡಗಪ್ಪ ತಂದೆ ಹೆಸರು ಎರೆಸಂಜಪ್ಪ. ಎರೆಸಂಜಪ್ಪ ನವರಿಗೆ ಒಬ್ಬರು ಅಥವಾ ಇಬ್ಬರೂ ಮಕ್ಕಳು ಇದ್ದರು. ದಾವಾ ಸ್ವತ್ತುಗಳು ಬುಡಗಪ್ಪನವರಿಗೆ ಮಂಜೂರು ಆಗಿರುತ್ತದೆ . ಬುಡಗಪ್ಪ ನವರಿಗೆ ಇಬ್ಬರೂ ಮಕ್ಕಳು ಅವರ ಹೆಸರು ಮುನಿಯಪ್ಪ ಮತ್ತು ಸೀತಮ್ಮ .ಮುನಿಯಪ್ಪ ನವರ ತಂದೆ ಬುಡಗಪ್ಪ ಎಂದು ತೋರಿಸಲು ಕ್ರಯ ಪತ್ರಗಳು ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿತ್ತೇನೆ.

ನನ್ನ ತಂದೆಗೆ ಮೂರು ಜನ ಗಂಡ ಮಕ್ಕಳು ಹಾಗೂ 6 ಜನ ಹೆಣ್ಣು ಮಕ್ಕಳು . ಹೆಣ್ಣು ಮಕ್ಕಳಲ್ಲಿ ಮೂರು ಜನ ಜೀವಾಂತಾಗಿದ್ದು ಗಂಡು ಮಕ್ಕಳಲ್ಲಿ ನಾನು ಒಬ್ಬನೇ ಜೀವಂತಾಗಿ ಇರುತ್ತೇನೆ. ಪವತಿ ವಾರಸು ಖಾತೆ ಮಾಡಿಕೊಡಲು ತಹಸೀಲ್ದಾರ್ ರವರಿಗೆ ಯಾವ ವಿಳಾಸ ತೋರಿಸುತ್ತೇನೆ ಎಂದು ಗೊತ್ತಿಲ್ಲ. ತಹಸೀಲ್ದಾರ್ ನವರ ಮುಂದೆ ಆವನಿ ಗ್ರಾಮದವಾನು ಎಂದು ಸುಳ್ಳುಗಿ ನಮೂದಿಸಿ ಅರ್ಜಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ 241 ಪ್ರತಿವಾದಿಗಳ ಅಜ್ಜ ಬುಡಗಪ್ಪ ನವರಿಗೆ ಸೇರಿದ್ದು, ನನ್ನ ಅಜ್ಜ

ಬುಡಗಪ್ಪ ನವರಿಗೆ ಸೇರಿಲ್ಲ ಎದರೆ ಸರಿಯಲ್ಲ. ,ಪ್ರತಿವಾದಿಗಳು ಬುಡಗಪ್ಪ ವಾರಸುದಾರು ಎಂದರೆ ನನಗೆ ಗೊತ್ತಿಲ್ಲ. ಬುಡಗಪ್ಪ ಹಾಗೂ ಮುನಿಯಪ್ಪ ನವರು ಎರೆಸಂಜಪ್ಪನವರ ಮಕ್ಕಳು ಎಂದರೆ ಗೊತ್ತಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ಪಾಟೀ ಸವಾಲಿಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಹರೀಶ್. ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು